ಆಣೆ ಮಾಡುವುದು ಸರಕುಗಳನ್ನು ಮಾರಾಟ ಮಾಡಲು ಉಪಯುಕ್ತವಾಗಿದೆ. ಆದರೆ, ಅದು ಲಾಭವನ್ನು ನಾಶಪಡಿಸುತ್ತದೆ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ಆಣೆ ಮಾಡುವುದು ಸರಕುಗಳನ್ನು ಮಾರಾಟ ಮಾಡಲು ಉಪಯುಕ್ತವಾಗಿದೆ. ಆದರೆ, ಅದು ಲಾಭವನ್ನು ನಾಶಪಡಿಸುತ್ತದೆ." [صحيح] [متفق عليه]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆಣೆ ಮಾಡುವುದರ ಮತ್ತು ಅದನ್ನು ಹೆಚ್ಚಾಗಿ ಬಳಸುವುದರ ವಿರುದ್ಧ ಎಚ್ಚರಿಸಿದ್ದಾರೆ. ಆತ ಮಾರಾಟ ಖರೀದಿ ಮಾಡುವುದರಲ್ಲಿ ಸತ್ಯವಂತನಾಗಿದ್ದರೂ ಸಹ. ಸರಕು ಮತ್ತು ವಸ್ತುಗಳ ಮಾರಾಟವು ಹೆಚ್ಚಾಗಲು ಅದು ಕಾರಣವಾಗುತ್ತದೆ, ಆದರೆ ಅದು ಲಾಭ ಮತ್ತು ಗಳಿಕೆಯ ಸಮೃದ್ಧಿಯನ್ನು (ಬರಕತ್ತನ್ನು) ಕಡಿಮೆ ಮಾಡುತ್ತದೆ ಮತ್ತು ನಾಶಪಡಿಸುತ್ತದೆ ಎಂದು ಅವರು ತಿಳಿಸಿದರು. ಅವನು ಗಳಿಸಿದ್ದನ್ನು ನಾಶ ಮಾಡಲು ಅಲ್ಲಾಹು ವಿವಿಧ ಕಾರಣಗಳನ್ನು ಉಂಟುಮಾಡಬಹುದು. ಕಳ್ಳತನ, ಅಗ್ನಿದುರಂತ, ಪ್ರವಾಹ, ಬಲವಂತದ ವಶಪಡಿಸುವಿಕೆ, ದರೋಡೆ ಅಥವಾ ಇತರ ಕಾರಣಗಳಿಂದ ಅಲ್ಲಾಹು ಅವನ ಆಸ್ತಿಯನ್ನು ನಾಶಪಡಿಸಬಹುದು.

http://www.sunnah.global/hadeeth/kn/show/5936